ಪ್ರಧಾನ  ಸಿವಿಲ್ ಜಡ್ಜ ಮತ್ತು ಜೆ ಎಮ್ ಎಫ್ ಸಿ, ಅಥಣಿ ಇವರ ನ್ಯಾಯಾಲಯದಲ್ಲಿ

ಸ್ಥಳ : ಅಥಣಿ

ಉಪಸ್ಥಿತರು

**ಜಗದೀಶ ಬಿಸೇರೊಟ್ಟಿ**
B.A.L.L.B.(Spl)
ಪ್ರಧಾನ ಸಿವಿಲ್ ಜಡ್ಜ ಮತ್ತು ಜೆ ಎಮ್ ಎಫ್ ಸಿ, ಅಥಣಿ

ಸಿ.ಸಿ. ನಂ.2254/2017

1) ಕರ್ನಾಟಕ ಸರಕಾರ,
(ಅಥಣಿ  ಪೋಲೀಸ ಠಾಣೆ)

....ಪಿರ್ಯಾದಿ

ಮತ್ತು

1) ದುರ್ಗಪ್ಪಾ ಹಗನಾಪ್ಪ ಬಾಗಡಿ ,
ವಯಸ್ಸುಃ 20 ವರ್ಷ, ಉದ್ಯೋಗಃ  ಒಕ್ಕಲುತನ,
ಸಾಃ ಅಥಣಿ,

2) ಮಾಯಪ್ಪಾ ಯಲ್ಲಪ್ಪ ಬಾಗಡಿ,
ವಯಸ್ಸುಃ 26 ವರ್ಷ, ಉದ್ಯೋಗಃ  ಒಕ್ಕಲುತನ,
ಸಾಃ ಅಥಣಿ, ಜಿಲ್ಲಾಃ ಬೆಳಗಾವಿ.

.... ಆರೋಪಿತರು

# ಆರೋಪಣೆ

ನಾನು ಜಗದೀಶ ಬಿಸೇರೊಟ್ಟಿ ಪ್ರಧಾನ ದಿವಾಣಿ ಮತ್ತು ಜೆ ಎಮ್ ಎಫ್ ಸಿ, ನ್ಯಾಯಾಲಯ, ನಿಮ್ಮ ಮೇಲೆ ಈ ಕೆಳಗಿನಂತೆ ಆರೋಪಣೆಗಳನ್ನು ಮಾಡಲಾಗಿದೆ.

1) ದಿನಾಂಕಃ 07-12-2016 ರಂದು ಸಾಯಂಕಾಲ 7.30 ಗಂಟೆ ಸುಮಾರಿಗೆ ತಂಗಡಿ ಗ್ರಾಮ ಹದ್ದಿಯಲ್ಲಿರುವ  ಗನು ರಾಮ ಮೋರೆ ಇವರ ಜಮೀನದ ಹತ್ತಿರ  ಅಥಣಿ ಐನಾಪೂರ ರಸ್ತೆಯ ಮೇಲೆ 1 ನೇ ಆರೋಪಿತನಾದ ನೀವು ಚಾಲನಾ ಅನುಜ್ಞಾ ಪತ್ರ ಹೊಂದದೇ  ತಡೆ ಹಿಡಿದ ಬಜಾಜ್ ಡಿಸ್ಕವರ ಕಂಪನಿಯ  ಕೆಂಪು ಬಣ್ಣದ ಮತ್ತು ಕರಿ ಬಣ್ಣದ ಮೋಟಾರ ಸೈಕಲ್ ನಂ. ಕೆಎ-23/ಇಎ-2576 ನೇದ್ದನ್ನು ಐನಾಪೂರ ಕಡೆಯಿಂದ ತಂಗಡಿ ಕಡೆಗೆ ಅತೀ ಜೋರಿನಿಂದ ನಿರ್ಲಕ್ಷತನದಿಂದ ರಸ್ತೆಯ ಕಡೆಗೆ ಲಕ್ಷ

ಕೊಡದೇ ನಡೆಸುತ್ತಾ ಹೋಗಿ, ನಿಮ್ಮ ಮುಂದೆ ಮುಂದೆ ರಸ್ತೆಯ ಬದಿಯಿಂದ ನಡೆಯುತ್ತ ಬರುತ್ತಿದ್ದ ಪಿರ್ಯಾದಿಯ ಅಕ್ಕ ಶೆಕ್ಕವಾ ಗೋಪಾಲ ಕಾಂಬಳೆ ಇವರ ತಲೆಗೆ, ಹಣೆಗೆ ಮತ್ತು ಬಲಗಾಲ ಮೊಳಕಾಲ ಕೆಳಗೆ ಭಾರಿ ಗಾಯ ಪಡಿಸಿ ಮರಣ ಪಡಿಸಿದ್ದಲ್ಲದೇ, ಚಾಸಾ 11 ರವರಿಗೆ ಭಾರಿ ಗಾಯ ಪಡಿಸಿ ಹಾಗೂ ಚಾಸಾ 12 ರವರಿಗೆ ಸಾದಾ ಗಾಯಪಡಿಸಿದ್ದು, ಆ ಮೂಲಕ 1 ನೇ ಆರೋಪಿತನಾದ ನೀವು ಭಾರತೀಯ ದಂಡ ಪ್ರಕ್ರಿಯ ಸಂಹಿತೆ ಕಲಂ 279, 337, 338 ಮತ್ತು 304(ಎ) ಮತ್ತು ಮೋಟಾರ ವಾಹನ ಕಾಯ್ದೆ ಕಲಂ 3 ಸಹ ಕಲಂ 181 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತಿರಿ ಎಂದು ಕಂಡು ಬಂದ ಮೇರೆಗೆ ನಿಮ್ಮ ಮೇಲೆ ಸಂಜ್ಞಯನ್ನು ತೆಗೆದುಕೊಳ್ಳಲಾಗಿದೆ ಮತ್ತು ಸದರಿ ಆರೋಪಣೆಗಳ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

2 ನೇ ಆರೋಪಿತನಾದ ನೀವು ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನಿಮ್ಮ ಮಾಲ್ಕೀಯ ಬಜಾಜ್ ಡಿಸ್ಕವರ ಕಂಪನಿಯ ಕೆಂಪು ಬಣ್ಣದ ಮತ್ತು ಕರಿ ಬಣ್ಣದ ಮೋಟಾರ ಸೈಕಲ್ ನಂ. ಕೆಎ-23/ಇಎ-2576 ವಾಹನಕ್ಕೆ ವಿಮಾ ಪಾಲಿಸಿ ಮಾಡಿಸದೇ ವಾಹನ ಚಾಲನಾ ಅನುಜ್ಞಾ ಪತ್ರವನ್ನು ಹೊಂದದೇ ಇರುವ 1 ನೇ ಆರೋಪಿತನಿಗೆ ನಡೆಸಲು ಕೊಟ್ಟಿದ್ದು, ಆ ಮೂಲಕ 2 ನೇ ಆರೋಪಿತನಾದ ನೀವು ಕಲಂ 146 ಸಹ ಕಲಂ 196 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ ಎಂದು ಕಂಡು ಬಂದ ಮೇರೆಗೆ ನಿಮ್ಮ ಮೇಲೆ ಸಂಜ್ಞೆಯನ್ನು ತೆಗೆದುಕೊಳ್ಳಲಾಗಿದೆ ಮತ್ತು ಸದರಿ ಆರೋಪಣೆಗಳ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಸ್ಥಳ : ಅಥಣಿ
ದಿನಾಂಕ : **24.02.2023.**

**sd/-**
**(ಜಗದೀಶ ಬಿಸೇರೊಟ್ಟಿ)**
ಪ್ರಧಾನ ಸಿವಿಲ್ ಜಡ್ಜ ಮತ್ತು ಜೆಎಮ್ಎಫಸಿ, ಅಥಣಿ.

ಃಃಪ್ರಮಾಣ ಪತ್ರಃಃ

ಈ ಮೂಲಕ ಪ್ರಮಾಣಿಕಸುವುದೇನೆಂದರೆ ಆರೋಪಿತನಿಗೆ ಆರೋಪಣೆಯ ಸಾರಾಂಶವನ್ನು ಓದಿ ಮತ್ತು ತಿಳಿಸಿ ಹೇಳಿ ನಂತರ ಆತನು ನೀಡಿದ ಉತ್ತರಗಳನ್ನು ನನ್ನ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ನಮೂದಿಸಿಕೊಳ್ಳಲಾಯಿತು.

ಸ್ಥಳಃ ಅಥಣಿ
ದಿನಾಂಕಃ **24.02.2023.**

**sd/-**
**(ಜಗದೀಶ ಬಿಸೇರೊಟ್ಟಿ)**
**ಪ್ರಧಾನ ಸಿವಿಲ್ ಜಡ್ಜ ಮತ್ತು ಜೆ ಎಮ್ ಎಫ್ ಸಿ, ಅಥಣಿ.**